ಪಿ ಡಬ್ಲ್ಯೂ ಃ 1

ದಿನಾಂಕ 21-03-2019 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಪಿ ಆರ್ ಎಚ್ ವಕೀಲರಿಂದಃ

ನಾನು ಪದವಿಧರ. ದಾವಾಸ್ತಿಯನ್ನು ಹಾಗೂ ಪ್ಲಾಟ್ ನಂ.46 ನ್ನು ಖರೀದಿಸುವಾಗ ಅವುಗಳ ಚಾಲ್ತಿ ಖಾತೆ, ಎಂ ಆರ್, ಋಣಭಾರ ಪತ್ರಗಳನ್ನು ನೋಡಿರುತ್ತೇನೆ. ಅನುಮೋದಿತ ನಕಾಶೆಯನ್ನು ನೋಡಿರುತ್ತೇನೆ. ಕ್ರಯದಾರರು ಅದನ್ನು ನೀಡಿರುತ್ತಾರೆ. ಸದರಿ ಅನುಮೋದಿತ ನಕಾಶೆಯನ್ನು ಪರಾಮರಿಸಿ ನೋಡಿರುತ್ತೇನೆ. ಮೈಸೂರು ಸರ್ಕಾರದವರು ಅದನ್ನು ಅನುಮೋದಿಸಿದರು.

ನಿವೇಶನ ಸಂಖ್ಯೆ 46, 47 ರಲ್ಲಿರುವ ನಿವೇಶನಗಳು ಒಂದೇ ಆದೇಶದಡಿ ಭೂ ಪರಿವರ್ತನೆ ಆಗಿದೆ. ನನ್ನ ಕ್ರಯ ಪತ್ರಗಳಲ್ಲಿ ಎರಡು ನಿವೇಶನಗಳು ಒಂದೇ ಆದೇಶದಲ್ಲಿ ಭೂ ಪರಿವರ್ತನೆ ಆದ ಬಗ್ಗೆ ವಕ್ಕಣೆ ಇದೆ ಅದನ್ನು ತಿಳಿದುಕೊಂಡಿದ್ದೇನೆ. ದಾವಾಸ್ತಿಯ ಕ್ರಯ ಪತ್ರವನ್ನು ಮಾತ್ರ ಸಲ್ಲಿಸಿದ್ದೇನೆ. ನಿಪಿ-1 ರ ಮೂಲ ದಾಖಲೆ ನನ್ನ ಬಳಿ ಇದೆ. ಮೂಲ ಪತ್ರ ಹಾಗೂ ನಿಪಿ-1 ರಲ್ಲಿ ●ಯಾವುದೇ ವ್ಯತ್ಯಾಸ ಇಲ್ಲ. ಸಾಕ್ಷಿಗೆ ಪ್ಲಾಟ್ ನಂ.46 ರ ಕ್ರಯ ಪತ್ರದ ದೃಢೀಕೃತ ನಕಲನ್ನು ತೋರಿಸಿ ಅದನ್ನು ಅವರು ಒಪ್ಪಿದ ಮೇರೆಗೆ ಅಭಿಮುಖವಾಗಿ ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ನಿಡಿ-1 ರಲ್ಲಿರುವ ವಿಚಾರಗಳ ಮಾಹಿತಿ ಇದೆ. ನಿಡಿ-1 ರ 2ನೇ ಪುಟದ 2 ನೇ ಖಂಡಿಕೆಯಲ್ಲಿರುವ ವಿಚಾರ ಸರಿ●ಯಾಗಿದೆ. ನಿಪಿ-1 ಹಾಗೂ ನಿಡಿ-1 ರಲ್ಲಿನ ಸ್ವತ್ತಿನ ಸಂಬಂಧ ಭೂ ಪರಿವರ್ತನೆ●ಯಾದ ಆದೇಶಗಳು ಬೇರೆ ಬೇರೆ ಎಂದರೆ ಸರಿ. ನಿವೇಶನ ನಂ.46, 47 ರ ಲೇಔಟ್ ಪ್ಲ್ಯಾನ್ ಗಳನ್ನು ನೋಡಿರುತ್ತೇನೆ, ಸಾಕ್ಷಿ ಎರಡಕ್ಕೂ ಒಂದೇ ಪ್ಲ್ಯಾನ್ ಇದೆ ಎನ್ನುತ್ತಾರೆ. ನನಗೆ ಕ್ರಯ ನೀಡಿದವರ ಬಳಿ ಎರಡು ನಿವೇಶನಗಳ ಪ್ರತ್ಯೇಕವಾಗಿ ಲೇಔಟ್ ಪ್ಲ್ಯಾನ್ ನೀಡುವಂತೆ ಕೇಳಿಲ್ಲ. ನಿಪಿ-1, ನಿಡಿ-1 ರಡಿಯಲ್ಲಿ ಪ್ಲಾಟ್ ನಂ.46, 47 ನ್ನು ನನಗೆ ಮಾರಾಟ ಮಾಡಿದ ವ್ಯಕ್ತಿ ಒಬ್ಬರೇ. ಸಾಕ್ಷಿ ಸದರಿ ನಿಶಾನೆಯಡಿ ಕ್ರಯ ಮಾಡಿರುವ ವ್ಯಕ್ತಿಗಳು ಬೇರೆ ಬೇರೆ ಎನ್ನುತ್ತಾರೆ. ಮಂಜುನಾಥ ಫಕಿರಪ್ಪ ಎಂಬ ವ್ಯಕ್ತಿ ನಿಪಿ-1, ನಿಡಿ-1 ನ್ನು ನನಗೆ ಬರೆದುಕೊಟ್ಟಿದ್ದಾರೆ ಎಂದರೆ ಸರಿ. ನಿಪಿ-1, ನಿಡಿ-1 ರಲ್ಲಿರುವ ಪಕ್ಷಗಾರರು ಒಂದೆ ಎಂದರೆ ಸರಿ. ನಿವೇಶನ ಸಂಖ್ಯೆ 46, 47 ರ ದೃಢೀಕೃತ ಲೇಔಟ್ ಪ್ಲ್ಯಾನ್ ಪಡೆದುಕೊಂಡು ಸಲ್ಲಿಸಿದ್ದೇನೆ. ಅವುಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿ. ಸಾಕ್ಷಿಗೆ ಸರ್ವೆ ನಂ.842 ಡ ರ ಅನುಮೋದಿತ ಲೆಔಟ್ ಪ್ಲ್ಯಾನ್ ನ ದೃಢಿಕೃತ ನಕಲನ್ನು ತೋರಿಸಿದ್ದು ಸಾಕ್ಷಿ ಅದನ್ನು ಒಪ್ಪಿದ ಮೇರೆಗೆ ಅಭಿಮುಖವಾಗಿ ನಿಡಿ-2 ಎಂದು ಗುರುತಿಸಲಾಯಿತು. ನಿಡಿ-2 ರಲ್ಲಿ ನಿವೇಶನ ಸಂಖ್ಯೆ 1 ಕಾಣಿಸುತ್ತಿದೆ ಎನ್ನುತ್ತಾರೆ, ಸದರಿ ನಿವೇಶನದ ಗುರುತನ್ನು ನಿಡಿ-2(ಎ) ಎಂದು ಗುರುತಿಸಲಾಯಿತು, ಸಾಕ್ಷಿ ನನಗೆ ಸರ್ವೆ ನಂ.892 ಡ

ರ ಸಂಬಂಧ  ನಕಾಶೆ ●ಯಾದ ಲೆಔಟ್ ಬಗ್ಗೆ ಗೊತ್ತಿಲ್ಲ, 891/1 ರಲ್ಲಿ ಆದ ಲೆಔಟ್ ಬಗ್ಗೆ ಗೊತ್ತು ಎನ್ನುತ್ತಾರೆ.  ಸರ್ವೆ ನಂ.892/1 ರಲ್ಲಿ ಲೆಔಟ್ ಆಗಿದ್ದರೆ ಅದಕ್ಕೂ ಸಹ ಅನುಮೋದಿತ ಲೆಔಟ್ ಪ್ಲ್ಯಾನ್ ಇರುತ್ತದೆ ಎಂದರೆ ಸರಿ.  ನನ್ನ ಹಾಗೂ ಪ್ರತಿವಾದಿಯ ನಡುವೆ ವ್ಯಾಜ್ಯ ಬಂದಾಗ ಲೇಔಟ್ ಪ್ಲ್ಯಾನ್ ಗಳನ್ನು ತರಿಸಿ ನೋಡಿದ್ದೇವೆ ಎಂದರೆ ಸರಿ.  ಎರಡು ಲೇಔಟ್ ಪ್ಲ್ಯಾನ್ ಗಳಲ್ಲಿ ●ಯಾವ ವ್ಯತ್ಯಾಸಗಳನ್ನು ಗಮನಿಸಿದ್ದೀರಿ ಎಂದರೆ ಸಾಕ್ಷಿ ಹೇಳಲು ಆಗುವುದಿಲ್ಲ ಎನ್ನುತ್ತಾರೆ. ವ್ಯತ್ಯಾಸ ಮರೆ ಮಾಚುವ ಉದ್ದೇಶದಿಂದ ಸರ್ವೆ ನಂ.892/1 ರ ಲೇಔಟ್ ಪ್ಲ್ಯಾನನ್ನು ಉದ್ದೇಶ ಪೂರ್ವಕವಾಗಿ ಸಲ್ಲಿಸಿಲ್ಲ ಎಂದರೆ ●ಯಾವುದೇ ಉತ್ತರ ನೀಡಿಲ್ಲ.  ದಾವಾ ಸಲ್ಲಿಸುವ 6 ತಿಂಗಳ ಪೂರ್ವದಲ್ಲೆ ನನ್ನ ಹಾಗೂ ಪ್ರತಿವಾದಿಯ ನಡುವೆ ದಾವಾಸ್ತಿಗಳ ಸಂಬಂಧ ಜಗಳ ಇತ್ತು.  ದಾವಾ ಸಲ್ಲಿಸುವ ಪೂರ್ವದಲ್ಲಿ ಪ್ರತಿವಾದಿಯನ್ನು ಅವರ ಲೇಔಟ್ ಪ್ಲ್ಯಾನ್, ದಾಖಲೆಗಳನ್ನು ತೋರಿಸುವಂತೆ ಕೇಳಿದ್ದೆ. ನಂತರ ದಾಖಲೆಗಳನ್ನು ●ಯಾವ ಸಂದರ್ಭದಲ್ಲಿ ●ಯಾವ ಸಮಕ್ಷಮದಲ್ಲಿ ಪರಿಶೀಲಿಸಿದ್ದೀವಿ ಎಂದು ನೆನಪಿಲ್ಲ. ಒಂದೆ ಆಸ್ತಿಯ ಸಂಬಂಧ ನನ್ನ ಹಾಗೂ ಪ್ರತಿವಾದಿಯ ನಡುವೆ ಹಕ್ಕು, ಮಾಲಿಕತ್ವದ ಬಗ್ಗೆ ಜಗಳ ಇದೆ.  ನೀವು ಹಾಗೂ ಪ್ರತಿವಾದಿ ಕೇಳುತ್ತಿರುವ/ಆಧರಿಸುವ ಸ್ವತ್ತಿನ ಪಶ್ಚಿಮಕ್ಕೆ ರಸ್ತೆ  ಇದೆ ಎಂದರೆ ಸರಿ.  ಸಾಕ್ಷಿಗೆ ನಿಡಿ-2 ನ್ನು ತೋರಿಸಿ ಅದರಲ್ಲಿ ಕಾಣುವನಿವೇಶನ ಸಂಖ್ಯೆ 1 ನಂತರ ರಸ್ತೆ ನಂತರ ನಿವೇಶನ ಸಂಖ್ಯೆ 5 ಆದ ನಂತರ  ಉತ್ತರಕ್ಕೆ ಸರ್ವೆ ನಂ.892 ರಲ್ಲಿ ಆದ ನಿವೇಶನಗಳಿವೆ ಎಂದರೆ ಸಾಕ್ಷಿ  ಅದನ್ನು ಹೇಳಲು ಆಗುತ್ತಿಲ್ಲ Confuse ಆಗುತ್ತಿದೆ ಎನ್ನುತ್ತಾರೆ.  ವಾದ ಪತ್ರದೊಂದಿಗೆ ಸಲ್ಲಿಸಿದ ಕಚ್ಚಾ ನಕಾಶೆ ಸ್ವತ್ತಿನ ವಾಸ್ತವತೆಗೆ ವಿರುದ್ದವಾಗಿದೆ ಎಂದರೆ ಸರಿಯಲ್ಲ.   ಸರ್ವೆ ನಂ.892/1 ರ ಲ್ಲಿ ರಚಿಸಿದ ಲೆಔಟ್ ನಲ್ಲಿ  ಸರ್ವೆ ನಂ.892/ಡಿ ರಲ್ಲಿ ರಚಿಸಿರುವ ನಿವೇಶನಗಳು ಇಲ್ಲ ಎಂದರೆ ಸರಿ.   ಸರ್ವೆ ನಂ.892/ಡಿ  ಜಮೀನಿನಲ್ಲಿರುವ ನಿವೇಶನಗಳಿಗೆ ಲಗತ್ತಾಗಿ ನಿಮಗೆ ಸೇರಿದ ನಿವೇಶನ ಸಂಖ್ಯೆ 46 ಇದೆಯೋ ಇಲ್ಲವೊ ಎಂದರೆ ಗೊತ್ತಿಲ್ಲ.

892/1 ರಲ್ಲಿ ರಚನೆ●ಯಾದ ಲೇಔಟ್ ಪ್ಲ್ಯಾನ್ ನ ದೃಢಿಕೃತ ನಕಲನ್ನು ಪಡೆದು ಸುಮಾರು 7 ವರ್ಷಗಳಾಗಿದೆ.  ಈ ದಿನದವರೆಗೂ ಸ್ವತ್ತನ್ನು ಸರ್ವೆ ಮಾಡಿಸಬೇಕು ಎಂದೆನಿಸಿಲ್ಲ. ದಾವಾಸ್ತಿಯನ್ನು ನನಗೆ ಕ್ರಯ ಮಾಡಿದವರು ಸರ್ವೆ ನಂ.892/ಡಿ ರಲ್ಲಿನ ನಿವೇಶನ 1 ನ್ನು ತೋರಿಸಿ ಕ್ರಯ ಮಾಡಿಲ್ಲ ಎಂದರೆ ಸಾಕ್ಷಿ ಅದನ್ನೇ ನಿವೇಶನ ನಂ.47 ಎಂದು ತೋರಿಸಿ ಕ್ರಯ ಮಾಡಿದ್ದಾರೆ ಎನ್ನುತ್ತಾರೆ.  ಇಂದಿಗೂ ನಿವೇಶನ ಸಂಖ್ಯೆ 1, 892/1 ರಲ್ಲಿರುವ ನಿವೇಶನ ಸಂಖ್ಯೆ 47 ಖಾಲಿ ನಿವೇಶನ ಎಂದರೆ ಸರಿ, ಸಾಕ್ಷಿ ನಂತರ ಮನೆ ಇದೆ ಎನ್ನುತ್ತಾರೆ.  ದಾವಾಸ್ತಿಯ ವರ್ಣನೆಯಲ್ಲಿ ಮನೆ ಇದೆ ಎಂದು ಕಾಣಿಸಿದ್ದೇವೆ.  ಸದರಿ ವಿಚಾರ ಸುಳ್ಳು ಎಂದರೆ ಸರಿಯಲ್ಲ.  ದಾವಾ ಸಲ್ಲಿಸುವ

ಸಮಯದಲ್ಲಿ ದಾಖಲೆಗಳನ್ನು ನೋಡಿ ವಾದ ಪತ್ರಕ್ಕೆ ಸಹಿ ಮಾಡಿದ್ದೇನೆ. ದಾವಾಸ್ತಿಯಲ್ಲಿ ಮನೆ ಇದೆ ಎಂಬ ವಿಚಾರವನ್ನು ದಾವಾ ಶೆಡ್ಯೂಲ್ ನಲ್ಲಿ ಕಾಣಿಸಿಲ್ಲ ಎಂದರೆ ಸಾಕ್ಷಿ ವಾದ ಪತ್ರವನ್ನು ನೋಡಿ ಹೌದು ಎನ್ನುತ್ತಾರೆ. ಕಚ್ಚಾ ನಕಾಶೆಯಲ್ಲಿಯೂ ಮನೆ ತೋರಿಸಿಲ್ಲ ಎಂದರೆ ಸರಿ. ಪ್ರತಿವಾದಿ ಸಲ್ಲಿಸಿರುವ ದಾಖಲೆಗಳ ಬಗ್ಗೆ ತಿಳಿದುಕೊಂಡಿಲ್ಲ.

(ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದರಿಂದ ಮುಂದುಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತುಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೆ ಸರಿ ಇದೆ.

ಸಹಿ

ಪ್ರಧಾನ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.